ಅಧ್ಯಾಯ 7 ಅಭ್ಯಾಸದ ಹಾಳೆ

# ಸ್ವೀಕಾರಯೋಗ್ಯವಾಗಿ ನೀನು ದೇವರನ್ನು ಆರಾಧಿಸುವಿಯೋ?

I. ದೇವರು ಅಪೇಕ್ಷಿಸುವದನ್ನು ನೀನು ಆರಾಧನೆಯಲ್ಲಿ ಉಪಯೋಗಿಸುವಿಯೋ?

1. ಆರಾಧನೆಯ ____________ ಸ್ವೀಕಾರಯೋಗ್ಯವಾದದ್ದು ಆಗಿರಬೇಕು. 1 ಪೇತ್ರ 2:5
2. ಆರಾಧನೆಯು ____________ ಲ್ಲಿ ____________ ಕ್ಕೆ ತಕ್ಕಹಾಗೆ ಇರಬೇಕು. ಯೋಹಾನ 4:24
3. ಸತ್ಯವು ____________ ಮುಖಾಂತರ ಬಂದಿತು. ಯೋಹಾನ 1:17
4. ಅಪೊಸ್ತಲರು ____________ ಸತ್ಯದಲ್ಲಿ ನಡಿಸಲ್ಪಟ್ಟರು. ಯೋಹಾನ 16:13
5. ____________ ಆಜ್ಞಾಪಿಸಿದ ಎಲ್ಲಾ ಸಂಗತಿಗಳನ್ನು ಅವರು ಬೋಧಿಸಬೇಕು. ಮತ್ತಾಯ 28:18-20

II. ದೇವರು ತಿರಸ್ಕರಿಸುವದನ್ನು ನೀನು ಉಪಯೋಗಿಸುವಿಯೋ?

1. ಮನುಷ್ಯರು ಕಲ್ಪಿಸಿದ ಕಟ್ಟಳೆಗಳಿಂದ ಆರಾಧಿಸುವುದು ____________ . ಮಾರ್ಕ 7:7
2. ದೇವರ ಆಜ್ಞೆಯನ್ನು ಬಿಟ್ಟು ಒಬ್ಬನು ____________ ಸಾಂಪ್ರದಾಯವನ್ನು ಹಿಡಿಯುವನು. ಮಾರ್ಕ 7:8
3. ಮಾನವ ಸಾಂಪ್ರದಾಯವು ದೇವರ ವಾಕ್ಯವನ್ನು ____________ . ಮಾರ್ಕ 7:13
4. ಜನರ ಸಾಂಪ್ರದಾಯವು ನಮ್ಮನ್ನು ____________ ಯಾಕಂದರೆ ಅದು ____________ ಇರುವದಿಲ್ಲ. ಕೊಲೊಸ್ಸೆ 2:8
5. ಮನುಷ್ಯರ ವಿಧಿಗಳು ____________ ದಿಂದ ತಿರುಗುವವು. ತೀತ 1:14


III. ಕ್ರಿಸ್ತನಿಂದ ಬಂದದ್ದನ್ನು ನೀನು ಉಪಯೋಗಿಸುವಿಯೋ, ಇಲ್ಲವೇ ಮನುಷ್ಯಲಿಂದ ಬಂದದ್ದನ್ನು ಉಪಯೋಗಿಸುವಿಯೋ?

| **ಕ್ರಿಸ್ತನಿಂದ** | | **ಮನುಷ್ಯರಿಂದ** |
|---|---|---|
| | ಲೂಕ 18:1 | |
| ____________ | 1 ತಿಮೊಥೆ 2:5 | ____________ |
| | ಲೂಕ 6:38 | |
| ____________ | 1 ಕೊರಿಂಥ 16:2 | ____________ |
| | 1 ಕೊರಿಂಥ 11:23-26 | |
| ____________ | ಅಪೊಸ್ತಲರ ಕೃತ್ಯಗಳು 20:7 | ____________ |
| ____________ | ಎಫೆಸ 5:19 | ____________ |
| ____________ | 2 ತಿಮೊಥೆ 2:2 | ____________ |

IV. ನೀನು ಕೂಡಿಸಿರುವಿಯೋ ಇಲ್ಲವೇ ತೆಗೆದು ಹಾಕಿರುವಿಯೋ?

1. ನಾವು ____________ ಇಲ್ಲವೇ ____________ . ಪ್ರಕಟನೆ 22:18, 19
2. ____________ ನೆಲೆಗೊಳ್ಳದೆ ಅದನ್ನು ____________ ಇಲ್ಲ.
   2 ಯೋಹಾನ 9

Copyright 1965 - Gospel Light Pub. Co., Delight, AR 71940



**ಅಧ್ಯಯನ ಪ್ರಶ್ನಾವಳಿಯನ್ನು ಪ್ರಸ್ತುತ ಪಡಿಸುವುದು:**

7

# "ಸ್ವೀಕಾರಯೋಗ್ಯವಾಗಿ ನೀನು ದೇವರನ್ನು ಆರಾಧಿಸುವಿಯೋ?"

ಇದು "ಸಭೆ" ಅಧ್ಯಯನ ಪ್ರಶ್ನಾವಳಿಯ ನಂತರ (ಪಾಠ 5) ಇಲ್ಲವೇ "ಸಂಘಟನೆ" ಅಧ್ಯಯನ ಪ್ರಶ್ನಾವಳಿಯ ನಂತರ (ಪಾಠ 6) ಅಧ್ಯಯನ ಮಾಡಬಹುದು. ಶಿಕ್ಷಕನು ಇದನ್ನು ಪ್ರಾರಂಭದ ಅಧ್ಯಯನ ಪ್ರಶ್ನಾವಳಿಯಾಗಿ ಉಪಯೋಗಿಸಬಾರದು.

**ಉದ್ದೇಶ**

"ಆರಾಧನೆ" ಎಂಬ ಅಧ್ಯಯನದ ಉದ್ದೇಶವು ಸಭೆಯ ಶಿರಸ್ಸಾದ ಯೇಸುವು ತನ್ನ ಸಭೆಯು ಉಪಯೋಗಿಸಲು ಬಯಸುವ ಆರಾಧನೆಯನ್ನು ಚರ್ಚಿಸುವುದಾಗಿದೆ.

**ಸಂಕ್ಷಿಪ್ತದಲ್ಲಿ ಪಾಠ**

ಮನುಷ್ಯನು ವಿಧೇಯನಾಗಬೇಕೆಂದು ಅಪೇಕ್ಷಿಸುವ ಎಲ್ಲಾ ಸತ್ಯಗಳು ಯೇಸುವಿನಿಂದ ಪರಿಶುದ್ಧಾತ್ಮನ ಮುಖಾಂತರ ಹೊಸ ಒಡಂಬಡಿಕೆಯ ಅಪೊಸ್ತಲರಿಗೂ, ಪ್ರವಾದಿಗಳಿಗೂ, ಕೊಡಲ್ಪಟ್ಟಿವೆ ಮತ್ತು ಹೊಸ ಒಡಂಬಡಿಕೆಯಲ್ಲಿ ದಾಖಲೆ ಮಾಡಲ್ಪಟ್ಟಿವೆ ಎಂದು ಈ ಅಧ್ಯಯನ ಪ್ರಶ್ನಾವಳಿಯು ತೋರಿಸುತ್ತದೆ. ದೇವರನ್ನು ಆರಾಧಿಸುವಲ್ಲಿ ಅನುಸರಿಸತಕ್ಕ ಸತ್ಯವು ಇದಾಗಿರುತ್ತದೆ. ಆಜ್ಞೆಗಳು ಮತ್ತು ಜನರ ಸಾಂಪ್ರದಾಯಗಳು ತಿರಸ್ಕರಿಸಲ್ಪಡ ಬೇಕು ಮತ್ತು ಯೇಸುಕ್ರಿಸ್ತನ ಮುಖಾಂತರ ಬಂದ ಸತ್ಯವು ಮಾತ್ರವೇ ದೇವರ ಆರಾಧನೆಯಲ್ಲಿ ಅನುಸರಿಸಲ್ಪಡತಕ್ಕದ್ದು.

**ಪೀಠಿಕೆ**

[ವಿದ್ಯಾರ್ಥಿಯನ್ನು ಈ ಪಾಠಕ್ಕಾಗಿ ಸಿದ್ಧಪಡಿಸುವಲ್ಲಿ ಶಿಕ್ಷಕನು ಆರಾಧನೆ, ಆರಾಧನೆಯ ಉದ್ದೇಶ, ಮತ್ತು ಆರಾಧನೆಯಲ್ಲಿ ಶ್ರೇಷ್ಠರಂತೆ ಯಾರನ್ನು ಗೌರವಿಸಬೇಕು ಎಂಬುದನ್ನು ಚರ್ಚಿಸುವುದರಿಂದ ಈ ಪಾಠವನ್ನು ಪರಿಚಯಿಸಬಹುದು.]

ದೇವರು ಆರಾಧನೆಯ ಕೇಂದ್ರವಾಗಿದ್ದಾನೆ. ಮನುಷ್ಯನು ಆರಾಧನೆಯ ಕೇಂದ್ರವಾಗಿರುವದಿಲ್ಲ. ಆರಾಧನೆಯು ಮರ್ಯಾದೆ ಕೊಡುವ, ಗೌರವಿಸುವ, ಸ್ತೋತ್ರಿಸುವ ಮತ್ತು ನಮ್ಮ ಸೃಷ್ಟಿಕರ್ತನಾದ ದೇವರನ್ನು ಆರಾಧಿಸುವ ಸಂಗತಿಯಾಗಿದೆ. ದೇವರೊಂದಿಗೆ ನಮ್ಮ ಅನುದಿನದ ನಡೆಯನ್ನು ಹಿಂದಿರುಗಿ ನೋಡುವಂತೆ ನಮ್ಮ ಜೀವಿತಗಳಲ್ಲಿ ದೇವರು ಮಾಡಿದ್ದರ ಬಗ್ಗೆ ಯೋಚಿಸುವದರಿಂದ ಆರಾಧನೆಯು ಉತ್ಪನ್ನವಾಗಬೇಕು. ದೇವರು ಏನು ಮಾಡಿದ್ದಾನೆ ಎಂಬುದನ್ನು ನಾವು ಯೋಚಿಸುವಂತೆ, ನಮ್ಮ ಹೃದಯಗಳು

ಕೃತಜ್ಞತಾಸ್ತುತಿಯಲ್ಲಿಯೂ ಸ್ತೋತ್ರದಲ್ಲಿಯೂ ದೇವರ ಕಡೆಗೆ ನೋಡಬೇಕು.

ಆರಾಧನೆಯಲ್ಲಿ ನಾವು ಮಾಡುವಂಥದ್ದು ಆತನಿಗೆ ನಮ್ಮ ಒಪ್ಪಿಸಿಕೊಡುವಿಕೆಯನ್ನು ಮತ್ತು ಆತನಿಗೆ ಗೌರವವನ್ನು ತೋರಿಸುತ್ತದೆ ಎಂಬುದರ ಬಗ್ಗೆ ನಿಶ್ಚಿತತೆಯುಳ್ಳವರಾಗಿರಬೇಕು. ಕೆಟ್ಟ ಮಾತುಗಳಿಗಾಗಿ ಪುರಷರನ್ನು ದಂಡಿಸಬೇಕೆಂದು ಜಾರ್ಜ್ ವಾಷಿಂಗ್ಟನ್ ತನ್ನ ಮಿಲಿಟರಿ ನಾಯಕರಿಗೆ ನಿರ್ದೇಶನ ಬರೆದಿದ್ದನೆಂದು ವರದಿ ಮಾಡಲ್ಪಟ್ಟಿದೆ. ದೇವರ ಸಹಾಯಕ್ಕಾಗಿ ಆತನನ್ನು ಕರೆಯುವ ನಾಲಿಗೆಗಳು ಆತನನ್ನು ಅಗೌರವಿಸಲು ಉಪಯೋಗಿಸಲ್ಪಡಬಾರದೆಂಬುದು ಅವನ ಉದ್ದೇಶವಾಗಿತ್ತು. ಆತನಿಗೆ ಅಸಹ್ಯವಾಗಿರುವ ಭಾಷೆಯನ್ನು ಉಪಯೋಗಿಸುವದರಿಂದ ಆತನಿಗೆ ಅಗೌರವ ತೋರಿಸಿದರೆ ಅವರ ಕಾರ್ಯವನ್ನು ದೇವರು ಆಶೀರ್ವದಿಸಬೇಕೆಂದು ಅವರು ಯಾಕೆ ನಿರೀಕ್ಷಿಸಬೇಕು. ಅದೇ ರೀತಿಯಲ್ಲಿ ದೇವರನ್ನು ಆರಾಧಿಸಲಿಕ್ಕೆ ನಮ್ಮ ಪ್ರಯತ್ನಗಳು ದೇವರಿಂದ ಕೇಳಲ್ಪಡದೇ ಇರುವದನ್ನು ಆರಾಧನೆಯಲ್ಲಿ ಉಪಯೋಗಿಸುವ ಪ್ರಯತ್ನಗಳಿಂದ ಕೆಡಿಸಬಾರದು.

## I. ದೇವರು ಏನನ್ನು ಅಪೇಕ್ಷಿಸುತ್ತಾನೆ

1. ಆರಾಧನೆಯಲ್ಲಿ ಏನು ಉಪಯೋಗಿಸಬೇಕೆಂಬುದನ್ನು ದೇವರು ಆಯ್ದುಕೊಂಡಿರುವನೋ? ಆತನ ಆರಾಧನೆಯಲ್ಲಿ ಉಪಯೋಗಿಸಲು ಮನುಷ್ಯನಿಂದ ದೇವರು ಏನನ್ನು ಅಪೇಕ್ಷಿಸುತ್ತಾನೆ? [ಓದಿರಿ 1 ಪೇತ್ರ 2:5.] ಆರಾಧನೆಯು *ಯಾರಿಗೆ* ಸ್ವೀಕಾರಯೋಗ್ಯವಾದದ್ದಾಗಿರಬೇಕು? [ಖಾಲಿಯಾದ ಸ್ಥಳದಲ್ಲಿ "ದೇವರಿಗೆ" ಎಂದು ತುಂಬಿರಿ.] ಆರಾಧನೆಯಲ್ಲಿ ಉಪಯೋಗಿಸಲ್ಪಟ್ಟಿದ್ದು ಜನರಿಗೆ ಸ್ವೀಕಾರಯೋಗ್ಯವಾದದ್ದಾಗಿರುವುದೋ ಇಲ್ಲವೋ ಎಂಬುದು ಪ್ರಶ್ನೆಯಲ್ಲ, ಯಾಕಂದರೆ ಮನುಷ್ಯನು ಆರಾಧನೆಯ ಕೇಂದ್ರವಾಗಿರುವದಿಲ್ಲ. ಮನುಷ್ಯನನ್ನಲ್ಲ, ಆದರೆ ನಾವು ಆರಾಧಿಸುವಾಗ ದೇವರನ್ನು ಮೆಚ್ಚಿಸಲು ಹುಡುಕಬೇಕು. ಮನುಷ್ಯನಿಗೆ ಸಂಬಂಧಿಸಿದಂತೆ, ಕೆಲವು ಬಹಳ ಆಕರ್ಷಣೀಯವಾದ ಉತ್ಪಾದನೆಗಳನ್ನು ಏರ್ಪಡಿಸಲು ನಾವು ಶಕ್ತರಾಗಿದ್ದೇವೆ. ಆದರೆ ಅದನ್ನು ನಾವು ವಿಚಾರಕ್ಕೆ ತೆಗೆದುಕೊಳ್ಳಬಾರದು. ಆರಾಧನೆಯಲ್ಲಿ ನಮ್ಮ ಪ್ರಯತ್ನವು ದೇವರನ್ನು ಮೆಚ್ಚಿಸುವುದಾಗಿರಬೇಕು.

2. ಆರಾಧನೆಯನ್ನು ಕುರಿತು ಯೇಸುವು ಏನು ಹೇಳಿದನು? ಹಳೇ ಒಡಂಬಡಿಕೆಯ ಆರಾಧನೆಯು ದಾಟಿ ಹೋದನಂತರ, ಯೇಸುವಿನ ಹಿಂಬಾಲಕರು ಹೇಗೆ ಆರಾಧಿಸ ಬೇಕು? [ಓದಿರಿ ಯೋಹಾನ 4:23, 24.] ಕ್ರೈಸ್ತರು ಆರಾಧನೆಯಲ್ಲಿ *ಏನನ್ನು* ಕೂಡಿಸಬೇಕು? [ಖಾಲಿಯಾದ ಸ್ಥಳದಲ್ಲಿ "ಆತ್ಮ" ಮತ್ತು "ಸತ್ಯ" ಎಂದು ತುಂಬಿರಿ.]

"ಆತ್ಮ" ಎಂಬುದರಿಂದ ಯೇಸುವು ಆರಾಧನೆಯಲ್ಲಿ ಮನುಷ್ಯನ ಆತ್ಮಿಕ ಭಾಗವು ಒಳಗೊಂಡಿರಬೇಕೆಂಬ ಅರ್ಥದಿಂದ ಹೇಳಿರಬೇಕು. ಕ್ರಮದೊಂದಿಗೆ ಹೋಗಿ ಆತ್ಮಿಕ ರೀತಿಯಲ್ಲಿ ಒಳಗೊಂಡಿರದೇ ಇರುವಂಥದ್ದಲ್ಲ. ಒಬ್ಬನು, "ನನ್ನ ಯೇಸುವೇ, ನಾನು ನಿನ್ನನ್ನು ಪ್ರೀತಿಸುವೆನು" ಎಂದು ಹಾಡನ್ನು ಹಾಡಬಹುದು, ಮತ್ತು ತನ್ನ ಕೆಲಸದ ಬಗ್ಗೆ, ಮನರಂಜನೆಯ ಬಗ್ಗೆ, ಇತ್ಯಾದಿಗಳ ಬಗ್ಗೆ ಯೋಚಿಸುತ್ತಿರಬಹುದು, ಮತ್ತು ತನ್ನ ಹೃದಯದಲ್ಲಿ, "ನನ್ನ ಯೇಸುವೇ, ನಾನು ನಿನ್ನನ್ನು ಪ್ರೀತಿಸುವೆನು" ಎಂದು ವ್ಯಕ್ತಪಡಿಸದೇ ಇರಬಹುದು, ಮತ್ತು ಈ ಕಾರಣದಿಂದ ಅವನು ಆರಾಧಿಸುತ್ತಿರುವದಿಲ್ಲ. ಅವನ ಆರಾಧನೆಯು ಆತ್ಮದಿಂದ ಇರುವದಿಲ್ಲ.

*ಆತ್ಮನಲ್ಲಿ* ಆರಾಧಿಸತಕ್ಕದ್ದಷ್ಟೇ ಅಲ್ಲ, ಆದರೆ ಅದು *ಸತ್ಯದಿಂದಲೂ ಇರಬೇಕು.*

“ಆತ್ಮವು” ತಿರುಳು ಮತ್ತು “ಸತ್ಯವು” ರೂಪವಾಗಿದೆ. ಒಬ್ಬನು ಕುಡಿಯುವದಕ್ಕಾಗಿ ನೀರನ್ನು ಕೇಳಬಹುದು, ಒಂದು ಲೋಟದಲ್ಲಿ ನೀರು ಎಂದು ಅರ್ಥವಿರುವುದು. ಒಬ್ಬ ವ್ಯಕ್ತಿಯು ತೋಟದ ನೀರಿನ ಪೈಪಿನಿಂದ ಒಬ್ಬನ ಕಡೆಗೆ ನೀರಿನ ಪ್ರವಾಹವನ್ನೇ ಹರಿಸಬಹುದು. “ಇಲ್ಲಿ ನಿನಗೆ ಕುಡಿಯಲು ನೀರು ಇದೆ!” ಎಂದು ಹೇಳಬಹುದು. *ತಿರುಳು* ಇರುತ್ತದೆ, ಆದರೆ *ರೂಪವು* ತಪ್ಪಾಗಿರುತ್ತದೆ. ಅದೇ ರೀತಿಯಲ್ಲಿ ಆರಾಧನೆಯಲ್ಲಿ ಒಬ್ಬನು ದೇವರನ್ನು ತಲುಪುತ್ತಿರಬಹುದು, ಆದರೆ ದೇವರಿಗೆ ಮೆಚ್ಚಿಕೆಯಾಗುವ ರೂಪವನ್ನು ಉಪಯೋಗಿಸುವದರಲ್ಲಿ ಸೋತುಹೋಗಿರಬಹುದು.

3. ದೇವರು ಸತ್ಯವನ್ನು ಪ್ರಕಟಿಸಿದನೋ? ಆತನು ಸತ್ಯವನ್ನು ಪ್ರಕಟಿಸಿದ್ದರೆ, ಅದನ್ನು ಎಲ್ಲಿ ಕಂಡುಕೊಳ್ಳಬಹುದು? [ಓದಿರಿ ಯೋಹಾನ 1:17.] *ಯಾರ* ಮುಖಾಂತರ ದೇವರು ಸತ್ಯವನ್ನು ಪ್ರಕಟಿಸಿದನು? [ಖಾಲಿಯಾದ ಸ್ಥಳದಲ್ಲಿ “ಯೇಸುಕ್ರಿಸ್ತ” ಎಂದು ತುಂಬಿರಿ.] ಸತ್ಯವು ಯೇಸುವಿನಲ್ಲಿ ಮಾತ್ರವೇ ಇರುವುದು (ಎಫೆಸ 4:21). ಸತ್ಯವು ಧರ್ಮಶಾಸ್ತ್ರದಲ್ಲಿ ಅಂದರೆ ಮೋಶೆಯು ತಂದದ್ದರಲ್ಲಿ ಕಂಡು ಬರಲಿಲ್ಲ. ಧರ್ಮಶಾಸ್ತ್ರವು ಒಂದು ಛಾಯೆ ಮಾತ್ರ ಆಗಿತ್ತು. (ಇಬ್ರಿಯ 10:1). ಈಗ ವಾಸ್ತವಿಕತೆಯು ಬಂದಿದ್ದರಿಂದ, ನಾವು ಇನ್ನೂ ಛಾಯೆಯ, ಧರ್ಮಶಾಸ್ತ್ರದ ಅಧೀನತೆಯಲ್ಲಿ ಇರುವವರಲ್ಲ (ಗಲಾತ್ಯ 3:24, 25; ಎಫೆಸ 2:14, 15; ಇಬ್ರಿಯ 7:18, 19). ಹಳೇ ಒಡಂಬಡಿಕೆಯ ಅಧೀನತೆಯಲ್ಲಿದ್ದವರಿಂದ ಆರಾಧನೆಯಲ್ಲಿ ಉಪಯೋಗಿಸಲ್ಪಟ್ಟ ಸಂಗತಿಗಳು, ಯೇಸುಕ್ರಿಸ್ತನ ಮುಖಾಂತರ ಬಂದ ಸತ್ಯದಲ್ಲಿ ಅವು ಒಳಗೊಂಡಿರದಿದ್ದರೆ ಕ್ರೈಸ್ತರಿಂದ ಉಪಯೋಗಿಸಲ್ಪಡಬಾರದು.

4. ಯೇಸುವು ಎಷ್ಟು ಸತ್ಯವನ್ನು ಪ್ರಕಟಿಸಿದನು? [ಓದಿರಿ ಯೋಹಾನ 16:13.] ಪರಿಶುದ್ಧಾತ್ಮನ ಮುಖಾಂತರ ಅಪೊಸ್ತಲರು *ಎಷ್ಟು* ಸತ್ಯವನ್ನು ಸ್ವೀಕರಿಸಿಕೊಂಡರು? [ಖಾಲಿಯಾದ ಸ್ಥಳದಲ್ಲಿ “ಎಲ್ಲಾ” ಎಂದು ತುಂಬಿರಿ.] ಯೇಸುವು ಮನುಷ್ಯನಿಗೆ ಪ್ರಕಟಿಸಬೇಕಾದ ಎಲ್ಲಾ ಸತ್ಯವನ್ನು ಅಪೊಸ್ತಲರಿಗೆ ಕೊಟ್ಟನು. ರೂಢಿಸಲ್ಪಟ್ಟಿದ್ದು ಅಪೊಸ್ತಲರಿಂದ ಬೋಧಿಸಿದ್ದು ಆಗಿರದಿದ್ದರೆ, ಅದು ಯೇಸು ಕ್ರಿಸ್ತನ ಮುಖಾಂತರ ಬಂದ ಸತ್ಯದ ಭಾಗವಾಗಿರುವದಿಲ್ಲ.

[*ಹಿಂಬದಿಯಲ್ಲಿ* ಮೇಲೆ “ಯೇಸು,” “ಪರಿಶುದ್ಧಾತ್ಮ” ಮತ್ತು “ಅಪೊಸ್ತಲರು” ಹಾಗೂ “ಪ್ರವಾದಿಗಳು” ಎಂದು ಬರೆಯಿರಿ. ಅದರ ಕೆಳಗೆ ಒಂದು ವರ್ತುಳ ತೆಗೆಯಿರಿ. ಅದರಲ್ಲಿ “ಎಲ್ಲಾ ಸತ್ಯ” ಎಂದು ಬರೆಯಿರಿ. ಪುಟ 192ನ್ನು ನೋಡಿರಿ.] ಸಭೆಯ, ಶಿರಸ್ಸಾದ ಯೇಸುವು ಹೊಸ ಒಡಂಬಡಿಕೆಯ ಅಪೊಸ್ತಲರಿಗೂ ಪ್ರವಾದಿಗಳಿಗೂ ಎಲ್ಲಾ ಸತ್ಯವನ್ನು ಪ್ರಕಟಿಸಿದನು. ಅವರು ಬೋಧಿಸಿದ್ದು ರೂಢಿಸಲ್ಪಟ್ಟರೆ ಅದು ಯೇಸುವಿನಿಂದ ಬಂದದ್ದಾಗಿರುತ್ತದೆ (ಮತ್ತಾಯ 18:18).

5. ಯೇಸುವು ಪರಲೋಕಕ್ಕೆ ಹಿಂದಿರುಗಿ ಹೋಗುವ ಸ್ವಲ್ಪ ಮೊದಲು ಅಪೊಸ್ತಲರಿಗೆ ಆಜ್ಞೆಯನ್ನು ಕೊಟ್ಟನು. ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಬೇಕೆಂದು ಮತ್ತು ಆತನು ಅವರಿಗೆ ಬೋಧಿಸಿದ ಸಂಗತಿಗಳನ್ನು ಕೈಕೊಳ್ಳಲು ಹೇಳಿ ದನಂತರ ಅವರಿಗೆ ಬಾಪ್ತಿಸ್ಮ ಮಾಡಿಸಬೇಕೆಂದೂ ಹೇಳಿದನು. ಯಾರು ಆಜ್ಞಾಪಿಸಿದ ಸಂಗತಿಗಳನ್ನು ಕೈಕೊಳ್ಳುವದಕ್ಕೆ ಹೊಸ ಕ್ರೈಸ್ತರಿಗೆ ಅವರು ಬೋಧಿಸಬೇಕಾಗಿತ್ತು? [ಓದಿರಿ ಮತ್ತಾಯ 28:20.] ಅವರು ಬೋಧಿಸಬೇಕಾದ ಸಂಗತಿಗಳು *ಯಾರು* ಆಜ್ಞಾಪಿಸಿದ್ದರು? [ಖಾಲಿಯಾದ ಸ್ಥಳದಲ್ಲಿ “ಯೇಸು” ಎಂದು ತುಂಬಿರಿ.]

ಯೇಸುವಿನಿಂದ ಈ ಅಪ್ಪಣೆಯು ಒಳಗೊಂಡದ್ದೂ ಹೊರತಾಗಿರುವಂಥದ್ದೂ ಆಗಿರುತ್ತದೆ. ಯೇಸು ಬೋಧಿಸಿದ್ದಕ್ಕಿಂತ *ಕಡಿಮೆಯಾದದ್ದನ್ನು* ಬೋಧಿಸುವುದು

ಸಾಕಾಗುವದಿಲ್ಲ, ಮತ್ತು ಯೇಸುವು ಬೋಧಿಸಿದ್ದಕ್ಕಿಂತ *ಹೆಚ್ಚಾದದ್ದನ್ನು* ಬೋಧಿಸುವುದು ಯೇಸುವು ಕೈಕೊಳ್ಳಬೇಕೆಂದು ಬೋಧಿಸಿದ್ದನ್ನು ಬೋಧಿಸುವುದಾಗಿರುವದಿಲ್ಲ. ಅದು ಯೇಸುವನ್ನು ಬಿಟ್ಟು ಬೇರೆ ಯಾರೋ ಬೋಧಿಸಿದ್ದನ್ನು ಕೈಕೊಳ್ಳಬೇಕೆಂದು ಬೋಧಿಸುವುದಾಗಿದೆ. ಅವರು ಯೇಸುವಿಗೆ ವಿಧೇಯರಾದರೆ, ಯೇಸುವು ಅವರಿಗೆ ಬೋಧಿಸಿದ್ದರಲ್ಲಿ ಕಡಿಮೆಯಾದದ್ದನ್ನಾಗಲೀ ಇಲ್ಲವೇ ಹೆಚ್ಚಾದದ್ದನ್ನಾಗಲೀ ಬೋಧಿಸದೇ, ಆತನ ಹಿಂಬಾಲಕರು ಎಲ್ಲವನ್ನೂ ಕೈಕೊಳ್ಳಬೇಕೆಂದು ಅವರು ಬೋಧಿಸುವರು.

ಈ ಭಾಗದಲ್ಲಿ ನಾವು ಏನನ್ನು ಕಲಿತುಕೊಂಡಿದ್ದೇವೆ? ದೇವರಿಗೆ ಸ್ವೀಕಾರ ಯೋಗ್ಯವಾದ ಆರಾಧನೆಯು ಆತ್ಮದಲ್ಲಿಯೂ ಸತ್ಯದಲ್ಲಿಯೂ ಇರುವ ಆರಾಧನೆಯಾಗಿರುತ್ತದೆ. ಅಪೊಸ್ತಲರ ಮತ್ತು ಪ್ರವಾದಿಗಳ ಮುಖಾಂತರ ಎಲ್ಲಾಸತ್ಯವು ಯೇಸುವಿನಿಂದ ಕೊಡಲ್ಪಟ್ಟಿದೆ. ಯೇಸುವಿನ ಹಿಂಬಾಲಕರು ಈ ಅಪೊಸ್ತಲರಿಂದ ಮತ್ತು ಪ್ರವಾದಿಗಳಿಂದ ಬೋಧಿಸಲ್ಪಟ್ಟ ಸತ್ಯವನ್ನು ಆರಾಧನೆಯಲ್ಲಿ ಉಪಯೋಗಿಸಬೇಕು.

## II. ದೇವರು ಯಾವುದನ್ನು ತಿರಸ್ಕರಿಸುತ್ತಾನೆ

ಆರಾಧನೆಯಲ್ಲಿ ಒಳಗೊಂಡಿರುವ ಎಲ್ಲವನ್ನೂ ದೇವರು ಸ್ವೀಕರಿಸುತ್ತಾನೆಯೋ? ತಾನು ಅಪೇಕ್ಷಿಸುವದನ್ನು ಆರಾಧನೆಯಲ್ಲಿ ಉಪಯೋಗಿಸಲು ಮನುಷ್ಯನಿಗೆ ಹಕ್ಕು ಇರುವುದೋ?

1. ದೇವರು ಆಜ್ಞಾಪಿಸದಿರುವ, ಮನುಷ್ಯನು ಆಜ್ಞಾಪಿಸಿರುವ ಸಂಗತಿಗಳ ಬಗ್ಗೆ ಏನು? ದೇವರ ಆಜ್ಞೆಗಳ ಮೇಲೆ ಅಲ್ಲ, ಆದರೆ ಮನುಷ್ಯನ ಆಜ್ಞೆಗಳ ಮೇಲೆ ಅವಲಂಭಿಸಿದ ಆರಾಧನೆಯನ್ನು ದೇವರು ಸ್ವೀಕರಿಸುವನೋ? [ಓದಿರಿ ಮಾರ್ಕ 7:7.] ಮನುಷ್ಯನ ಆಜ್ಞೆಗಳ ಮೇಲೆ ಅವಲಂಭಿಸಿದ ಆರಾಧನೆಗೆ ದೇವರು *ಬೆಲೆ*ಕೊಡುವನೋ? [ಖಾಲಿಯಾದ ಸ್ಥಳದಲ್ಲಿ "ವ್ಯರ್ಥ" ಎಂದು ತುಂಬಿರಿ.] "ವ್ಯರ್ಥ" ಎಂಬುದರ ಅರ್ಥ ವೇನು? "ವ್ಯರ್ಥ" ಅಂದರೆ ಉಪಯೋಗವಿಲ್ಲದ್ದು, ಬೆಲೆಯಿಲ್ಲದ್ದು, ಮೌಲ್ಯವಿಲ್ಲದ್ದು, ಫಲವಿಲ್ಲದ್ದು ಎಂದಾಗುತ್ತದೆ. ಮನುಷ್ಯನು ಆಜ್ಞಾಪಿಸಿದ ಸಂಗತಿಗಳಿಂದ ದೇವರನ್ನು ಆರಾಧಿಸಲು ಹುಡುಕುವುದು ದೇವರಿಗೆ ಬೆಲೆಯಿಲ್ಲದ್ದಾಗಿದೆ.

2. ಆರಾಧನೆಯ ಎರಡು ಮೂಲಗಳು ಮಾತ್ರ ಸಾಧ್ಯವಾಗಿವೆ. ಆರಾಧನೆಯಲ್ಲಿ ಒಬ್ಬನು ಉಪಯೋಗಿಸುವಂಥದ್ದು ದೇವರಿಂದ ಬರತಕ್ಕದ್ದು ಇಲ್ಲವೇ ಮನುಷ್ಯನಿಂದ ಬರತಕ್ಕದ್ದು. ದೇವರು ಆಜ್ಞಾಪಿಸಿದ್ದನ್ನು ಒಬ್ಬನು ತಳ್ಳಿಬಿಡುವಾಗ ಅವನು ಯಾರ ಆಜ್ಞೆಗಳನ್ನು ಕೈಕೊಳ್ಳುವ ಅವಶ್ಯಕತೆ ಬೀಳುವುದು? [ಓದಿರಿ ಮಾರ್ಕ 7:8.] ಮನುಷ್ಯನು ದೇವರನ್ನು ಅನುಸರಿಸದೇ ಇರುವಾಗ *ಯಾರ* ಸಾಂಪ್ರದಾಯಗಳನ್ನು ಅನುಸರಿಸುವನು? [ಖಾಲಿಯಾದ ಸ್ಥಳದಲ್ಲಿ "ಮನುಷ್ಯರ" ಎಂದು ತುಂಬಿರಿ.]

ಜನರ ಸಾಂಪ್ರದಾಯಗಳನ್ನು ಅನುಸರಿಸಲು ಯೇಸುವು ಯೆಹೂದಿ ಜನರಿಗೆ ಶಿಫಾರಸು ಮಾಡಲಿಲ್ಲ. ಮಾನವ ಸಾಂಪ್ರದಾಯಗಳನ್ನು ಅವರು ಅನುಸರಿಸಿದ್ದರಿಂದ ಯೇಸುವು ಅವರನ್ನು ಖಂಡಿಸಿದನು. ಮನುಷ್ಯನು ಮನುಷ್ಯನ ಸಾಂಪ್ರದಾಯಗಳನ್ನಲ್ಲ ಆದರೆ ತನ್ನ ಚಿತ್ತವನ್ನು ಅನುಸರಿಸಬೇಕೆಂದು ದೇವರು ನಿರೀಕ್ಷಿಸುತ್ತಾನೆ.

3. ಮಾನವರ ಸಾಂಪ್ರದಾಯಗಳನ್ನು ಅನುಸರಿಸುವವರು ದೇವರ ವಾಕ್ಯಕ್ಕೆ ಏನು ಮಾಡುತ್ತಾರೆ? [ಓದಿರಿ ಮಾರ್ಕ 7:13.] ಜನರ ಸಾಂಪ್ರದಾಯಗಳು ದೇವರ ವಾಕ್ಯವನ್ನು *ಏನನ್ನಾಗಿ* ಮಾಡುತ್ತವೆ? [ಖಾಲಿಯಾದ ಸ್ಥಳದಲ್ಲಿ "ನಿರರ್ಥಕ" ಎಂದು ತುಂಬಿರಿ.] ಮಾನವ ಸಾಂಪ್ರದಾಯಗಳಿಂದ ದೇವರ ವಾಕ್ಯವು ನಿರರ್ಥಕವಾಗಿ ಮಾಡಲ್ಪಟ್ಟಿದೆ.

ಸಾಗರದಲ್ಲಿ ಹಡಗಿನಿಂದ ಬಿದ್ದು ಮುಳುಗುತ್ತಿರುವ ಮನುಷ್ಯನ ಕಡೆಗೆ, ಜೀವ ರಕ್ಷಕವು ಎಸೆಯಲ್ಪಟ್ಟಾಗ ಅದು ಅವನ ಜೀವವನ್ನು ರಕ್ಷಿಸಬಹುದು. ಹೀಗಿದ್ದರೂ, ಯಾರಾದರೂ ಅವನ ಕಡೆಗೆ ಕಲ್ಲುಗಳನ್ನು ಎಸೆಯುತ್ತ, ಆ ಮನುಷ್ಯನು ಜೀವ ರಕ್ಷಕವನ್ನು ತಲುಪದ ಹಾಗೆ ಆತಂಕವೊಡ್ಡಿದರೆ, ಅವನನ್ನು ಉಳಿಸುವ ಜೀವ ರಕ್ಷಕವು ವ್ಯರ್ಥವಾಗಿ ಹೋಗುವುದು. ಯೇಸು ಕ್ರಿಸ್ತನ ಮುಖಾಂತರ ಪ್ರಕಟಿಸಲ್ಪಟ್ಟ ಸತ್ಯವನ್ನು ಅನುಸರಿಸುವದಕ್ಕೆ ಅಡ್ಡೀಪಡಿಸುವ ಮನುಷ್ಯರ ಸಾಂಪ್ರದಾಯಗಳು ಇದನ್ನು ಮಾಡಬಹುದು.

4. ಮನುಷ್ಯರ ಸಾಂಪ್ರದಾಯಗಳು ನಮಗೆ ಇನ್ನೂ ಏನನ್ನು ಮಾಡಬಲ್ಲವು? [ಓದಿರಿ ಕೊಲೊಸ್ಸೆ 2:8.] ಅವು *ಏನು* ಮಾಡಬಲ್ಲವು? [ಖಾಲಿಯಾದ ಸ್ಥಳದಲ್ಲಿ "ಕೆಡಿಸುತ್ತೇವೆ" ಎಂದು ತುಂಬಿರಿ.] ಅವು ಇದನ್ನು ಮಾಡುವವು ಯಾಕಂದರೆ ಅವು *ಯಾರಿಂದ ಬಂದಿರುವದಿಲ್ಲ?* [ಖಾಲಿಯಾದ ಸ್ಥಳದಲ್ಲಿ "ಕ್ರಿಸ್ತ" ಎಂದು ತುಂಬಿರಿ.] ನಾವು ಮಾಡುವಂಥದ್ದನ್ನು ಮನುಷ್ಯರ ಬೋಧನೆಗೆ ಅನುಸಾರವಾಗಿ ಇರುವುದು ಇಲ್ಲವೇ, ಕ್ರಿಸ್ತನ ಬೋಧನೆಗೆ ಅನುಗುಣವಾಗಿ ಇರುವುದು. ಮನುಷ್ಯರ ಬೋಧನೆಯನ್ನು ನಾವು ಅನುಸರಿಸಿದರೆ ದೇವರು ನಮ್ಮನ್ನು ಸ್ವೀಕರಿಸುವನೋ ಇಲ್ಲವೇ ಕ್ರಿಸ್ತನ ಬೋಧನೆಯನ್ನು ಅನುಸರಿಸಿದರೆ ನಮ್ಮನ್ನು ಸ್ವೀಕರಿಸುವನೋ? ನಾವು ಮಾಡುವಂಥದ್ದು ಮನುಷ್ಯರ ಬೋಧನೆಗೆ ಅನುಸಾರವಾಗಿದ್ದರೆ, ದೇವರು ಅದನ್ನು ತಿರಸ್ಕರಿಸುವನು. ಆದರೆ ಕ್ರಿಸ್ತನ ಬೋಧನೆಗೆ ಅನುಸಾರವಾಗಿದ್ದರೆ, ದೇವರು ಅದನ್ನು ಸ್ವೀಕರಿಸುವನು.

[*ಹಿಂಬದಿಯಲ್ಲಿ* ವರ್ತುಳದ ಹೊರಗೆ "ಜನರ ಸಾಂಪ್ರದಾಯಗಳು" ಎಂದು ಬರೆಯಿರಿ. ಪುಟ 192ನ್ನು ನೋಡಿರಿ.] ಮನುಷ್ಯರ ಬೋಧನೆಗಳು ಯೇಸು ಕ್ರಿಸ್ತನ ಸತ್ಯಕ್ಕೆ ಅನುಸಾರವಾಗಿ ಇರುವದಿಲ್ಲ. ದೇವರಿಗೆ ಸ್ವೀಕಾರಯೋಗ್ಯವಾಗಿರುವಂಥ ಸಂಗತಿಗಳ ವರ್ತುಳದಲ್ಲಿ ಒಳಗೆ ಅವು ಇರಲಾರವು.

5. ಮನುಷ್ಯರ ಆಜ್ಞೆಗಳನ್ನು ಬೋಧಿಸುವವರು ಯಾರು? [ಓದಿರಿ ತೀತ 1:14.] ಮನುಷ್ಯರ ಆಜ್ಞೆಗಳನ್ನು ಬೋಧಿಸುವವರು *ಯಾವುದರಿಂದ* ತಿರುಗಿ ಹೋಗಿದ್ದಾರೆ? [ಖಾಲಿಯಾದ ಸ್ಥಳದಲ್ಲಿ "ಸತ್ಯ" ಎಂದು ತುಂಬಿರಿ.] ಸತ್ಯವು ಕ್ರಿಸ್ತ ಯೇಸುವಿನಲ್ಲಿರುವುದು. ಮನುಷ್ಯರ ಆಜ್ಞೆಗಳನ್ನು ಬೋಧಿಸುವವರು ಸತ್ಯದಿಂದ ದೂರ ಹೋಗಿರುವವರಾಗಿರುವರು, ಮತ್ತು ಈ ಕಾರಣದಿಂದ ಯೇಸುವಿನಿಂದ ದೂರ ಹೋಗಿರುವವರಾಗಿರುವರು.

ಈ ಭಾಗದಲ್ಲಿ ನಾವು ಏನನ್ನು ಕಲಿತುಕೊಂಡಿರುವೆವು? ಮಾನವ ಮೂಲದ ಆರಾಧನೆಯನ್ನು ದೇವರು ತಿರಸ್ಕರಿಸುವನೆಂದು ಕಲಿತುಕೊಂಡಿರುವೆವು. ಕೇವಲ ಮನುಷ್ಯರ ಸಾಂಪ್ರದಾಯವಾಗಿರುವಂಥವುಗಳನ್ನು ಆರಾಧನೆಯಲ್ಲಿ ಉಪಯೋಗಿಸುವುದು ದೇವರ ದೃಷ್ಟಿಯಲ್ಲಿ ನಿರುಪಯೋಗವಾದದ್ದಾಗಿರುತ್ತದೆ. ನಾವು ಅನುಸರಿಸಲು ಕೇವಲ ಎರಡು ಆಯ್ಕೆಗಳಿವೆ - ಯೇಸು ಕ್ರಿಸ್ತನ ಮುಖಾಂತರ ಬಂದ ಸತ್ಯ ಇಲ್ಲವೇ ಮನುಷ್ಯರ ಸಾಂಪ್ರದಾಯಗಳು. ಯೇಸುವಿನ ಮುಖಾಂತರ ಬಂದದ್ದನ್ನು ದೇವರು ಸ್ವೀಕರಿಸುತ್ತಾನೆ ಆದರೆ ಮನುಷ್ಯನಿಂದ ಬರುವಂಥದ್ದನ್ನು ತಿರಸ್ಕರಿಸುತ್ತಾನೆ.

## III. ಕ್ರಿಸ್ತನಿಂದ ಇಲ್ಲವೇ ಮನುಷ್ಯರಿಂದ

ಒಂದು ಆಚರಣೆಯು ದೇವರಿಗೆ ಸ್ವೀಕಾರಯೋಗ್ಯವಾಗಿದೆಯೋ ಎಂಬುದನ್ನು ನಿರ್ಧರಿಸಲು, ಅದರ ಮೂಲವನ್ನು ನಾವು ನಿರ್ಧರಿಸತಕ್ಕದ್ದು. ನಾವು ಮಾಡುವಂಥದ್ದು ಯೇಸುವಿನ, ಅಪೊಸ್ತಲರ ಮತ್ತು ಪ್ರವಾದಿಗಳ ಬೋಧನೆಯಲ್ಲಿ ಅಂದರೆ ಹೊಸ

ಒಡಂಬಡಿಕೆಯಲ್ಲಿ ಕಂಡು ಬಂದರೆ, ಅದನ್ನು ದೇವರು ಸ್ವೀಕರಿಸುವನೆಂದು ತಿಳಿದುಕೊಳ್ಳುತ್ತೇವೆ, ಆದರೆ ಅಲ್ಲಿ ಅದನ್ನು ನಾವು ಕಂಡು ಕೊಳ್ಳದಿದ್ದರೆ, ಅದು ಮಾನವ ಮೂಲದ್ದು ಎಂದು ತಿಳಿಯಬೇಕು ಮತ್ತು ತಿರಸ್ಕರಿಸಬೇಕು.

ಲೂಕ 18:1 ಮತ್ತು 1 ತಿಮೊಥೆ 2:5ರಲ್ಲಿ ನಾವು *ಏನು* ಮಾಡಬೇಕೆಂದು ಹೇಳಲ್ಪಟ್ಟಿದ್ದೇವೆ? [ಮೊದಲಿನ ಖಾಲಿಯಾದ ಸ್ಥಳದಲ್ಲಿ "ಕ್ರಿಸ್ತನಿಂದ" ಎಂಬುದರ ಕೆಳಗೆ "ಪ್ರಾರ್ಥಿಸು" ಎಂದು ತುಂಬಿರಿ.] ನಾವು ದೇವರಿಗೆ ಪ್ರಾರ್ಥಿಸಿದರೆ, ಅದು ಸ್ವೀಕಾರಯೋಗ್ಯವಾಗಿರುವುದೋ? ನಮ್ಮ ಮಧ್ಯಸ್ಥಗಾರನಂತೆ ಯೇಸುವಿನ ಮುಖಾಂತರ ನಾವು ಪ್ರಾರ್ಥಿಸಿದರೆ, ಇದು ಸ್ವೀಕಾರಯೋಗ್ಯವಾಗಿರುವುದೋ? ಇದು ಸ್ವೀಕಾರಯೋಗ್ಯವಾಗಿರುವುದೆಂದು ನಾವು ಹೇಗೆ ತಿಳಿದಿರುತ್ತೇವೆ? ಅದು ಸ್ವೀಕಾರಯೋಗ್ಯವಾಗಿರುವುದೆಂದು ತಿಳಿದಿರುತ್ತೇವೆ ಯಾಕಂದರೆ ಅದು ಹೊಸ ಒಡಂಬಡಿಕೆಯಲ್ಲಿ ಬೋಧಿಸಲ್ಪಟ್ಟಿರುತ್ತದೆ. ಹಳೇ ಒಡಂಬಡಿಕೆಯಲ್ಲಿ ಅವರು ಯೇಸುವಿನ ಮುಖಾಂತರ ಪ್ರಾರ್ಥಿಸಲಿಲ್ಲ. ಹಳೇ ಒಡಂಬಡಿಕೆಯಲ್ಲಿ ಅವರು ಮಾಡಿದ್ದನ್ನು ನಾವು ಮಾಡಬಹುದೋ?

ಪ್ರಾರ್ಥನೆಯೊಂದಿಗೆ ಸಂಬಂಧಿಸಿದ ಮನುಷ್ಯರ ಸಾಂಪ್ರದಾಯಗಳಲ್ಲಿ ಕೆಲವು *ಯಾವವು?* ಕೆಲವರು ಮರಿಯಳ ಮುಖಾಂತರ ಪ್ರಾರ್ಥಿಸುವರು? ಕೆಲವರು ಧೂಪ ಉಪಯೋಗಿಸುವರು? ಕೆಲವರು ಸಂತರಿಗೆ ಪ್ರಾರ್ಥಿಸುವರು? ಕೆಲವರು ಪ್ರಾರ್ಥನೆಯಲ್ಲಿ (ರೋಜರಿ) ಉಪಯೋಗಿಸುವರು? [ಖಾಲಿಯಾದ ಸ್ಥಳದಲ್ಲಿ "ಮನುಷ್ಯರಿಂದ" ಎಂಬುದರ ಕೆಳಗೆ ಮನುಷ್ಯರಿಂದ ಈ ಸಂಗತಿಗಳನ್ನು ತುಂಬಿರಿ.] ಈ ಆಚರಣೆಗಳನ್ನು ದೇವರು ಸ್ವೀಕರಿಸುವನೋ? ಈ ಆಚರಣೆಗಳು ದೇವರಿಂದ ಬಂದವುಗಳೋ ಇಲ್ಲವೇ ಮನುಷ್ಯರಿಂದ ಬಂದವುಗಳೋ? ಹಳೇ ಒಡಂಬಡಿಕೆಯಲ್ಲಿ ಅವರು ಧೂಪವನ್ನು ಉಪಯೋಗಿಸಿದರೋ? ಅವರು ಮಾಡಿದಂತೆ ನಮ್ಮ ಪ್ರಾರ್ಥನೆಯೊಂದಿಗೆ ನಾವು ಧೂಪ ಉಪಯೋಗಿಸಬಹುದೋ?

ಈ ಸಂಗತಿಗಳನ್ನು ಮಾಡಬೇಕೆಂದರೆ, ಅವು ಎಲ್ಲಿ ಬೋಧಿಸಲ್ಪಟ್ಟಿವೆ? ಎಂಬುದನ್ನು ಕಂಡುಕೊಳ್ಳತಕ್ಕದ್ದು. ಹೊಸ ಒಡಂಬಡಿಕೆಯಲ್ಲಿ ಬೋಧಿಸಿದ್ದನ್ನು ನಾವು ಕಂಡುಕೊಳ್ಳುವ ಅವಶ್ಯಕತೆಯಿದೆ. ಹೊಸ ಒಡಂಬಡಿಕೆಯಲ್ಲಿ ಅವು ಕಂಡು ಬಾರದಿದ್ದರೆ ಅವು ಮನುಷ್ಯರ ಸಾಂಪ್ರದಾಯಗಳಾಗಿವೆ, ಬೆಲೆಯಿಲ್ಲದವುಗಳಾಗಿವೆ ಮತ್ತು ಅವುಗಳನ್ನು ತಪ್ಪಿಸಿಕೊಳ್ಳಬೇಕು.

ಆರಾಧನೆಯಲ್ಲಿ ಇನ್ನೂ ಏನನ್ನೂ ಉಪಯೋಗಿಸಬೇಕು. [ಓದಿರಿ ಲೂಕ 6:38; 1 ಕೊರಿಂಥ 16:2.] ನಾವು *ಏನು* ಮಾಡಬೇಕೆಂದು ಯೇಸುವು ಆಜ್ಞಾಪಿಸಿದ್ದಾನೆ? [ಖಾಲಿಯಾದ ಸ್ಥಳದಲ್ಲಿ "ಕ್ರಿಸ್ತನಿಂದ" ಎಂಬುದರ ಕೆಳಗೆ "ಕೊಡುವುದು" ಎಂದು ತುಂಬಿರಿ.] ಇದು ದೇವರಿಂದಲೋ ಇಲ್ಲವೇ ಮನುಷ್ಯರಿಂದಲೋ? ಇದು ಯೇಸುವಿನಿಂದ ಆಗಿದ್ದರೆ, ಆಗ ಇದು ಸ್ವೀಕಾರಯೋಗ್ಯವಾಗಿದೆ, ಆದರೆ ಇದು ಮನುಷ್ಯರಿಂದ ಆಗಿದ್ದರೆ, ಆಗ ಇದನ್ನು ತಪ್ಪಿಸಿಕೊಳ್ಳಬೇಕು. ಕೊಡುವುದು ದೇವರಿಗೆ ಸ್ವೀಕಾರಯೋಗ್ಯವಾಗಿದೆ ಎಂಬುದನ್ನು ನಾವು ತಿಳಿದಿದ್ದೇವೆ ಯಾಕಂದರೆ *ಕೊಡುವುದು* ಯೇಸುವಿನಿಂದ ಮತ್ತು ಅಪೊಸ್ತಲರಿಂದ ಬಂದದ್ದಾಗಿದೆ.

ತಮ್ಮ ಸಭೆಗಳಿಗೆ ಸಹಾಯ ಮಾಡುವದಕ್ಕಾಗಿ ಹಣವನ್ನು ಕೂಡಿಸಲು ಮನುಷ್ಯರು *ಯಾವುದನ್ನು* ಪರಿಚಯಿಸಲಿದ್ದಾರೆ? [ಖಾಲಿಯಾದ ಸ್ಥಳದಲ್ಲಿ "ಮನುಷ್ಯರಿಂದ" ಎಂಬುದರ ಕೆಳಗೆ "ಮಾರಾಟಗಳು, ರ್‍ಯಾಫಲ್ಸ್, ವಸ್ತು ಮಾರಾಟಗಳು, ದಶಮಾಂಶ ಇತ್ಯಾದಿ" ಎಂದು ತುಂಬಿರಿ.] ಇವು ಕ್ರಿಸ್ತನಿಂದ ಬಂದವುಗಳೋ ಇಲ್ಲವೇ ಮನುಷ್ಯರಿಂದ ಬಂದವುಗಳೋ? ಅವು ಕ್ರಿಸ್ತನಿಂದ ಬಂದವುಗಳಾಗಿದ್ದರೆ, ಅವು ಆತನ ಬೋಧನೆಯಲ್ಲಿ

ಕಂಡುಬರುವವು, ಇಲ್ಲದಿದ್ದರೆ, ಅವು ಮನುಷ್ಯರಿಂದ ಬಂದವುಗಳು ಮತ್ತು ಅವುಗಳನ್ನು ತಿರಸ್ಕರಿಸತಕ್ಕದ್ದು. ಈ ಆಚರಣೆಗಳನ್ನು ನಾವು ಯೇಸುವಿನ ಇಲ್ಲವೇ ಅಪೊಸ್ತಲರ ಬೋಧನೆಗಳಲ್ಲಿ ನಾವು ಕಂಡುಕೊಳ್ಳುವದಿಲ್ಲ. ದಶಮಾಂಶವು ಹಳೇ ಒಡಂಬಡಿಕೆಯಲ್ಲಿ ಆಜ್ಞಾಪಿಸಲ್ಪಟ್ಟಿರುವುದೋ? ದಶಮಾಂಶವು ಯೇಸುವಿನಿಂದ ಮತ್ತು ಅಪೊಸ್ತಲರಿಂದ ಬೋಧಿಸಲ್ಪಟ್ಟಿತೋ? ದಶಮಾಂಶವು ಇಂದು ನಮಗಾಗಿದ್ದರೆ, ಅದು ಯೇಸುವಿನಿಂದ ಆಜ್ಞಾಪಿಸಲ್ಪಡತಕ್ಕದ್ದು. ಅದು ಯೇಸುವಿನ ಆಜ್ಞೆಯಾಗಿದ್ದರೆ, ಅದು ಆತನ ಇಲ್ಲವೇ ಅಪೊಸ್ತಲರ ಬೋಧನೆಯಲ್ಲಿ ಕಂಡು ಬರಬೇಕು. ಅದು ಯೇಸುವಿನ ಬೋಧನೆಯಲ್ಲಿ ಕಂಡು ಬಾರದಿದ್ದರಿಂದ, ಅದು ಮನುಷ್ಯರ ಆಜ್ಞೆಯಂತೆ ತಿರಸ್ಕರಿಸಲ್ಪಡತಕ್ಕದ್ದು.

ಕ್ರಿಸ್ತನ ಸಭೆಯಿಂದ ಇನ್ನೂ ಯಾವುದು ಆಚರಿಸಲ್ಪಡತಕ್ಕದ್ದು? [ಓದಿರಿ 1 ಕೊರಿಂಥ 11:23-26; ಅಪೊಸ್ತಲರ ಕೃತ್ಯಗಳು 20:7.] ಯೇಸುವು ತನ್ನ ಶಿಷ್ಯರಿಗೆ *ಏನನ್ನು* ತಿನ್ನಬೇಕು ಎಂದು ಹೇಳಿದನು? [ಖಾಲಿಯಾದ ಸ್ಥಳದಲ್ಲಿ "ಕ್ರಿಸ್ತನಿಂದ" ಎಂಬುದರ ಕೆಳಗೆ "ಕರ್ತನ ಭೋಜನ" ಎಂದು ತುಂಬಿರಿ.] ಕರ್ತನ ಭೋಜನವು ಕ್ರಿಸ್ತನಿಂದಲೋ ಇಲ್ಲವೇ ಮನುಷ್ಯರಿಂದಲೋ? ಅದು ಕ್ರಿಸ್ತನಿಂದಾಗಿದ್ದರೆ, ನಾವು ಅದನ್ನು ಸ್ವೀಕರಿಸ ಬೇಕು, ಆದರೆ ಅದು ಮನುಷ್ಯರಿಂದಾಗಿದ್ದರೆ, ನಾವು ಅದನ್ನು ತಿರಸ್ಕರಿಸಬೇಕು. ಯೇಸುವು ಬರುವವರೆಗೆ ನಾವು ರೊಟ್ಟಿಯನ್ನು ತಿಂದು ದ್ರಾಕ್ಷಾರಸವನ್ನು ಕುಡಿಯ ಬೇಕು, ಯಾಕಂದರೆ ಈ ರೀತಿಯಲ್ಲಿ ತನ್ನನ್ನು ಜ್ಞಾಪಿಸಿಕೊಳ್ಳುವದಕ್ಕಾಗಿ ಮಾಡ ಬೇಕೆಂದು ಯೇಸು ಹೇಳಿದನು.

ಕ್ರೈಸ್ತರು ವಾರದ ಮೊದಲನೆಯ ದಿನದಲ್ಲಿ ಕೂಡಿಬರುತ್ತಿದ್ದರು (ಅಪೊಸ್ತಲರ ಕೃತ್ಯಗಳು 20:7), ಶನಿವಾರದ ಸಬ್ಬತ್ ದಿನದಂದು ಅಲ್ಲ (ಮತ್ತಾಯ 28:1; ಮಾರ್ಕ 16:1; ಲೂಕ 22:1; ಯೋಹಾನ 20:1). ಕ್ರೈಸ್ತರು ಅಪೊಸ್ತಲರ ಮಾರ್ಗದರ್ಶನದಲ್ಲಿ ಇದ್ದರು, ಆದುದರಿಂದ ವಾರದ ಮೊದಲನೆಯ ದಿನದಂದು ಕರ್ತನ ಭೋಜನವು ಆಚರಿಸಲ್ಪಡುವುದು ಯೇಸುವಿನಿಂದ ಬಂದದ್ದಾಗಿದೆ. ಕರ್ತನ ಭೋಜನವನ್ನು ಆಚರಿಸುವದರಿಂದ ವಾರದ ಮೊದಲನೆಯ ದಿನದಂದು ನಾವು ಒಂದಾಗಿ ಕೂಡಿ ಬರುವುದು ಯೇಸುವಿನಿಂದ ಬಂದದ್ದನ್ನು ಆಚರಿಸುತ್ತೇವೆ, ಇದು ಮನುಷ್ಯರಿಂದ ಬಂದದ್ದಲ್ಲ.

ಕರ್ತನ ಭೋಜನಕ್ಕೆ ಜನರು ಏನು ಮಾಡಿದ್ದಾರೆ? ಕೆಲವರು ಜನರಿಂದ ದ್ರಾಕ್ಷಾರಸವನ್ನು ತಡೆಹಿಡಿದಿದ್ದಾರೆ. ಇತರರು ದ್ರಾಕ್ಷಾರಸದ ಬದಲಾಗಿ ನೀರನ್ನು ಉಪಯೋಗಿಸುತ್ತಾರೆ. ಕೆಲವರು ಕರ್ತನ ಭೋಜನವನ್ನು ವರ್ಷಕ್ಕೊಂದು ಸಲ, ಮೂರು ತಿಂಗಳಿಗೊಂದು ಸಲ, ತಿಂಗಳಿಗೊಂದು ಸಲ ಇಲ್ಲವೇ ವಾರದ ಯಾವುದೇ ದಿನ ಆಚರಿಸುತ್ತಾರೆ. [ಖಾಲಿಯಾದ ಸ್ಥಳದಲ್ಲಿ "ಮನುಷ್ಯರಿಂದ" ಎಂಬುದರ ಕೆಳಗೆ "ನೀರು, ಒಂದು ವಿಧ, ಮತ್ತು ವರ್ಷಕ್ಕೊಮ್ಮೆ" ಎಂದು ತುಂಬಿರಿ.] ಈ ಆಚರಣೆಗಳು ಕ್ರಿಸ್ತನಿಂದ ಬಂದವುಗಳೋ ಇಲ್ಲವೇ ಮನುಷ್ಯರಿಂದ ಬಂದವುಗಳೋ? ಅವು ಕ್ರಿಸ್ತನಿಂದ ಬಂದವು ಗಳಾಗಿದ್ದರೆ, ಅವು ಯೇಸುವಿನ ಮತ್ತು ಅಪೊಸ್ತಲರ ಬೋಧನೆಯಲ್ಲಿ ಕಂಡುಬರ ಬೇಕು. ಅವು ಅಲ್ಲಿ ಕಂಡು ಬಾರದಿದ್ದರೆ, ಅವು ಮನುಷ್ಯರಿಂದ ಬಂದವುಗಳಾಗಿವೆ ಮತ್ತು ಅವು ತಿರಸ್ಕರಿಸಲ್ಪಡಬೇಕು. ಅವು ಯೇಸುವಿನ ಬೋಧನೆಯಲ್ಲಿ ಕಂಡುಬರುವದಿಲ್ಲ, ಆದುದರಿಂದ ಅವು ಮನುಷ್ಯರ ಬೋಧನೆಯಂತೆ - ತಿರಸ್ಕರಿಸಲ್ಪಡಬೇಕು.

ಹಳೇ ಒಡಂಬಡಿಕೆಯ ಅಧೀನತೆಯಲ್ಲಿ ಜನರು ಐಗುಪ್ತದ ದಾಸತ್ವದಿಂದ ತಮ್ಮ ಬಿಡುಗಡೆಯನ್ನು ಸಬ್ಬತ್ ದಿನದಂದು (ಅಂದರೆ ಶನಿವಾರದಂದು) ಜ್ಞಾಪಿಸಿಕೊಂಡರು. ಈ ರೀತಿಯಲ್ಲಿ ಕ್ರೈಸ್ತರು ಸಬ್ಬತ್ ದಿನವನ್ನು ಆಚರಿಸಬೇಕೋ? ಅಂಥ

ಆಚರಣೆಯು ಯೇಸುವಿನ ಬೋಧನೆಯಲ್ಲಿ ಕಂಡು ಬಾರದೇ ಇದ್ದುದರಿಂದ ಅದು ಆಚರಿಸಲ್ಪಡಬಾರದು.

ಆದಿ ಸಭೆಯು ಆರಾಧನೆಯಲ್ಲಿ ಇನ್ನೂ ಏನನ್ನು ಮಾಡಿತು? [ಓದಿರಿ ಎಫೆಸ 5:19.] ಅವರು *ಏನು* ಮಾಡಿದರು? [ಖಾಲಿಯಾದ ಸ್ಥಳದಲ್ಲಿ "ಮನುಷ್ಯರಿಂದ" ಎಂಬುದರ ಕೆಳಗೆ "ಹಾಡು" ಎಂದು ತುಂಬಿರಿ.] ಹಾಡಲು ಕ್ರೈಸ್ತರು ನಿರ್ದೇಶಿಸಲ್ಪಟ್ಟರು.

ದೇವರಿಗೆ ಆರಾಧನೆ ಮಾಡುವಲ್ಲಿ ಜನರು ಹಾಡುವದನ್ನಲ್ಲದೇ ಮತ್ತೇನನ್ನು ಕೂಡಿಸಿದರು? [ಖಾಲಿಯಾದ ಸ್ಥಳದಲ್ಲಿ "ಮನಷ್ಯರಿಂದ" ಎಂಬುದರ ಕೆಳಗೆ, "ಪಿಯಾನೋ, ಆರ್ಗನ್, ಗಿಟಾರ್ ಇತ್ಯಾದಿ" ತುಂಬಿರಿ.] ಇವು ಆರಾಧನೆಯಲ್ಲಿ ಉಪಯೋಗಿಸಲ್ಪಡಬೇಕಾಗಿದ್ದರೆ, ಅವು ಯೇಸುವಿನ ಮತ್ತು ಅಪೊಸ್ತಲರ ಬೋಧ ನೆಯಲ್ಲಿ ಕಂಡುಬರಬೇಕು. ಯೇಸುವಿನ ಬೋಧನೆಯಲ್ಲಿ ಅವು ಕಂಡು ಬರಲಾರವು, ಆದುದರಿಂದ ಅವು ಮನುಷ್ಯರಿಂದಾಗುವವು ಮತ್ತು ಈ ಕಾರಣದಿಂದ ಅವು ತಿರಸ್ಕರಿಸಲ್ಪಡತಕ್ಕದ್ದು.

ಸಂಗೀತವಾದ್ಯಗಳ ಹಳೇ ಒಡಂಬಡಿಕೆಯ ಆರಾಧನೆಯಲ್ಲಿ ಉಪಯೋಗಿಸ ಲ್ಪಟ್ಟವೋ? ಅವು ದೇವಾಲಯದ ಆರಾಧನೆಯ ಭಾಗವಾಗಿದ್ದವು. ಹಳೇ ಒಡಂಬಡಿಕೆಯ ಆರಾಧನೆಯಲ್ಲಿ ಉಪಯೋಗಿಸಲ್ಪಟ್ಟದ್ದು ಕ್ರೈಸ್ತರಿಂದ ಆರಾಧನೆಯಲ್ಲಿ ಉಪಯೋಗಿ ಸಲ್ಪಡಬೇಕೋ? ಯೇಸುವಿನಿಂದ ಆಜ್ಞಾಪಿಸಲ್ಪಟ್ಟದ್ದನ್ನು ಕ್ರೈಸ್ತರು ಉಪಯೋಗಿಸ ಬೇಕು. ದೇವರ ಆರಾಧನೆಯಲ್ಲಿ ಸಂಗೀತ ವಾದ್ಯಗಳನ್ನು ಉಪಯೋಗಿಸುವ ಮೊದಲು, ಅವರು ಯೇಸುವಿನ ಬೋಧನೆಯಲ್ಲಿ ಅವುಗಳ ಉಪಯೋಗಕ್ಕಾಗಿ ನಿರ್ದೇಶನಗ ಳನ್ನು ಕಂಡುಕೊಳ್ಳತಕ್ಕದ್ದು. ಅವು ಯೇಸುವಿನ ಮತ್ತು ಅಪೊಸ್ತಲರ ಬೋಧನೆಯಲ್ಲಿ *ಕಂಡುಬರುವದಿಲ್ಲ.* ಆದುದರಿಂದ ಮನುಷ್ಯರಿಂದ ಎಂದು ತಿರಸ್ಕರಿಸಲ್ಪಡತಕ್ಕದ್ದು. ಹೊಸ ಒಡಂಬಡಿಕೆಯಲ್ಲಿ ಹಾಡುವುದು ಮಾತ್ರವೇ ಸಂಗೀತ ಪದ್ಧತಿಯಾಗಿ ಬೋಧಿ ಸಲ್ಪಟ್ಟಿದೆ ಮತ್ತು ರೂಢಿಸಲ್ಪಟ್ಟಿದೆ, ಆದುದರಿಂದ ಇಂದು ಆರಾಧನೆಯಲ್ಲಿ ಸಂಗೀತ ಮಾತ್ರವೇ ಉಪಯೋಗಿಸಲ್ಪಡತಕ್ಕದ್ದು.

ಹೊಸ ಒಡಂಬಡಿಕೆಯಲ್ಲಿ ಬೋಧಿಸಲ್ಪಟ್ಟ ಇನ್ನೊಂದು ಆಚರಣೆ ಯಾವುದು? ಅವರು ಏನು ಮಾಡಬೇಕೆಂದು ಹೇಳಲ್ಪಟ್ಟಿರುವರು? [ಓದಿರಿ 2 ತಿಮೊಥೆ 2:2.] ಅವರು *ಏನು* ಮಾಡಬೇಕಾಗಿತ್ತು? [ಖಾಲಿಯಾದ ಸ್ಥಳದಲ್ಲಿ "ಕ್ರಿಸ್ತನಿಂದ" ಎಂಬುದರ ಕೆಳಗೆ "ಬೋಧಿಸು" ಎಂದು ತುಂಬಿರಿ.] ತನ್ನ ಜನರಿಗೆ ಆಕರ್ಷಿಸುವ ಮತ್ತು ಬೋಧಿಸುವ ದೇವರ ಮಾರ್ಗವು ಬೋಧಿಸುವುದರ ಮುಖಾಂತರವಾಗಿರುತ್ತದೆ.

ಮನುಷ್ಯರು *ಏನನ್ನು* ಮಾಡಿದ್ದಾರೆ? [ಖಾಲಿಯಾದ ಸ್ಥಳದಲ್ಲಿ "ಮನುಷ್ಯರಿಂದ" ಎಂಬುದರ ಕೆಳಗೆ "ಲಂಚ, ಒತ್ತಾಯ, ಮತ್ತು ಮನರಂಜನೆ" ಎಂದು ತುಂಬಿರಿ.] ಯೇಸುವಿನ ಬೋಧನೆಯನ್ನು ಅನುಸರಿಸಲಿಕ್ಕೆ ಜನರನ್ನು ತರುವಲ್ಲಿ ಅಂಥ ವಿಧಾನ ಗಳು ಯೇಸುವಿನ ಮತ್ತು ಅಪೊಸ್ತಲರ ಬೋಧನೆಗೆ ಬಾಹಿರವಾದವುಗಳಾಗಿರುತ್ತವೆ. ಅವರು ಬೋಧಿಸಿದ್ದರಲ್ಲಿ ಇವು ಕಂಡು ಬಾರದೇ ಇರುವದರಿಂದ, ಅಂಥ ಆಚಾರಗಳು ಮನುಷ್ಯರಿಂದ ಬಂದವುಗಳಾಗಿದ್ದು, ಅವು ತಪ್ಪಿಸಲ್ಪಡತಕ್ಕದ್ದು. ಐತಿಹಾಸಿಕ ಹಿಂದಿನ ಸಮಯದಲ್ಲಿ, ಮನುಷ್ಯರು ಜನರಿಗೆ ಹಣಕೊಟ್ಟು, ಇತರ ರೀತಿಯ ಲಂಚಗಳನ್ನು ಕೊಟ್ಟು ಇಲ್ಲವೇ ಯೇಸುವನ್ನು ಹಿಂಬಾಲಿಸಲು ಅನ್ಯರನ್ನು ತರಲು ಸೈನ್ಯಗಳನ್ನು ಉಪಯೋಗಿಸಿದ್ದಾರೆ. ಮನರಂಜನೆಯು ಹೆಚ್ಚು ಜನರು ಹಾಜರಿರುವಂತೆ ಮಾಡಲು ಇನ್ನೊಂದು ಮಾರ್ಗವಾಗಿತ್ತು. ಯೇಸುವಿನ ಬಳಿಗೆ ಬರುವವರು ಮತ್ತು ಆತನನ್ನು ಹಿಂಬಾಲಿಸಲು ಮುಂದುವರಿಯುವವರು ಬೋಧಿಸಲ್ಪಟ್ಟವರಾಗಿರುವರು (ಯೋಹಾನ

6:45). ಇದು ಯೇಸುವಿನಿಂದ ಬಂದದ್ದು.

[ಹಿಂಬದಿಯಲ್ಲಿ ವರ್ತುಳದ ಒಳಗೆ "ಪ್ರಾರ್ಥಿಸು," "ಕೊಡು," "ಕರ್ತನ ಭೋಜನ," "ಹಾಡು," "ಬೋಧಿಸು" ಎಂದು ಬರೆಯಿರಿ. "ಮನುಷ್ಯರ ಸಾಂಪ್ರದಾಯಗಳು" ಎಂಬುದರ ಕೆಳಗೆ, ವರ್ತುಳದ ಹೊರಗೆ "ಮರಿಯಳಿಗೆ ಪ್ರಾರ್ಥನೆ," "ಧೂಪ," "ರ್‍ಯಾಫಲ್ಸ್," "ರೊಟ್ಟಿ ಮಾತ್ರ," "ಪಿಯಾನೋ," "ಆರ್ಗನ್," "ಲಂಚ," "ಒತ್ತಾಯ" ಎಂದು ತುಂಬಿರಿ. ಪುಟ 192ನ್ನು ನೋಡಿರಿ.]

ಈ ಭಾಗದಲ್ಲಿ ನಾವು ಏನನ್ನು ಕಲಿತುಕೊಂಡಿದ್ದೇವೆ? ಯೇಸುವಿನಿಂದ ಪ್ರಕಟಿಸಲ್ಪಟ್ಟ ಸತ್ಯವನ್ನು ಅನುಸರಿಸಲು ಹುಡುಕುವವರು ಯೇಸುವಿನಿಂದ ಬೋಧಿಸಲ್ಪಟ್ಟ ಸಂಗತಿಗಳನ್ನು ಮಾತ್ರವೇ ಅನುಸರಿಸುವರು ಎಂಬುದನ್ನು ಕಲಿತು ಕೊಂಡಿದ್ದೇವೆ ಮನುಷ್ಯನಿಂದ ಪ್ರಾರಂಭಿಸಲ್ಪಟ್ಟ ಸಂಗತಿಗಳನ್ನು ಉಪಯೋಗಿ ಸುವದರಿಂದ ಅವರು ದೇವರನ್ನು ಆರಾಧಿಸಲು ಹುಡುಕುವದಿಲ್ಲ. ಅವರು ಕೊಡುವರು, ಪ್ರಾರ್ಥಿಸುವರು, ಕರ್ತನ ಭೋಜನದಲ್ಲಿ ಪಾಲುಗಾರರಾಗುವರು, ಹಾಡುವರು ಮತ್ತು ಬೋಧಿಸುವರು. ಯೇಸುವಿನೊಂದಿಗೆ ಪ್ರಾರಂಭವಾಗದೇ ಇರುವುದನ್ನು ಅವರು ಕೂಡಿಸಿಕೊಳ್ಳುವದಿಲ್ಲ.

## IV. ಕೂಡಿಸುವುದು ಮತ್ತು ತೆಗೆದು ಹಾಕುವುದು

ನಾವು ಉಪಯೋಗಿಸಬೇಕೆಂದು ಯೇಸು ಹೇಳಿದ ಸಂಗತಿಗಳನ್ನು ಉಪಯೋಗಿಸುವದರಿಂದ ದೇವರನ್ನು ಆರಾಧಿಸಲು ನೀವು ಹುಡುಕುತ್ತಿರುವಿರೋ? ಕ್ರೈಸ್ತ ಆರಾಧನೆಯೊಳಗೆ ಮನುಷ್ಯರು ಪರಿಚಯಿಸಿದ ಸಂಗತಿಗಳನ್ನು ನೀವು ಉಪಯೋಗಿಸುತ್ತಿರುವಿರೋ?

1. ನಾವು ಏನನ್ನು ಮಾಡಬಾರದು? [ಓದಿರಿ ಪ್ರಕಟನೆ 22:18, 19.] ಏನನ್ನು ಮಾಡುವದರ ಮೇಲೆ ಯೇಸುವು ಶಾಪಕೊಟ್ಟನು? [ಖಾಲಿಯಾದ ಸ್ಥಳಗಳಲ್ಲಿ "ಕೂಡಿಸು" ಮತ್ತು "ತೆಗೆದು ಹಾಕು" ಎಂದು ತುಂಬಿರಿ.] ಪ್ರಕಟನೆಯ ಪುಸ್ತಕವನ್ನು ಕುರಿತು ಈ ಹೇಳಿಕೆಯು ಮಾಡಲ್ಪಟ್ಟಿತು. ಇದನ್ನು ಒಪ್ಪಿಕೊಳ್ಳತಕ್ಕದ್ದು. ಬೈಬಲಿನ ಇತರ ಪುಸ್ತಕಗಳಿಗಿಂತ ಹೆಚ್ಚಾಗಿ ಪ್ರಕಟನೆಯ ಪುಸ್ತಕದ ಬಗ್ಗೆ ಹೆಚ್ಚಾಗಿ ದೇವರು ಯೋಚಿ ಸುವನೋ ಇಲ್ಲವೇ ಎಂಬುದು ಪ್ರಶ್ನೆಯಾಗಿದೆ? ದೇವರು ಪ್ರಕಟನೆಯ ಪುಸ್ತಕವನ್ನು ಬದಲಾಯಿಸಲು ಬಯಸುವದಿಲ್ಲವೋ ಆದರೆ ಇತರ ಬೈಬಲಿನ ಪುಸ್ತಕಗಳನ್ನು ಬದಲಾಯಿಸುವುದು ಸರಿಯಾಗಿರುವುದೋ? ನಿಶ್ಚಯವಾಗಿಯೂ ದೇವರು ಬೈಬಲಿನ ಇತರ ಪುಸ್ತಕಗಳನ್ನು ಒಂದೇ ರೀತಿಯಲ್ಲಿ ದೃಷ್ಟಿಸುತ್ತಾನೆ. ಇಂಥ ತೀರ್ಮಾನಿಸುವಿಕೆಯು ಬೈಬಲಿನ ಬೋಧನೆಯ ಉಳಿದ ಭಾಗದೊಂದಿಗೆ ಹೊಂದಿಕೊಂಡದ್ದಾಗಿರುತ್ತದೆ (ಧರ್ಮೋಪದೇಶಕಾಂಡ 4:2; 12:32; ಜ್ಞಾನೋಕ್ತಿ 30:6).

2. ದೇವರೊಂದಿಗೆ ಮತ್ತು ಯೇಸುವಿನೊಂದಿಗೆ ಅವರ ಸಂಬಂಧವನ್ನು ಯಾರು ಬೇರೆ ಮಾಡುತ್ತಾರೆ? [ಓದಿರಿ 2 ಯೋಹಾನ 9.] ಯೇಸುವಿನೊಂದಿಗೂ ಮತ್ತು ದೇವರೊಂದಿಗೂ ನಮ್ಮ ಸಂಬಂಧದ ಮೇಲೆ ಯಾವುದು ಪರಿಣಾಮ ಮಾಡುತ್ತದೆ? [ಖಾಲಿಯಾದ ಸ್ಥಳದಲ್ಲಿ "ಅತಿಕ್ರಮಿಸು," "ಕ್ರಿಸ್ತ" ಮತ್ತು "ದೇವರು" ಎಂದು ತುಂಬಿರಿ.] "ಅತಿಕ್ರಮಿಸು" ಅಂದರೆ "ದಾಟಿಹೋಗು, ಮಿತಿಗಳನ್ನು ದಾಟಿ ಹೊರಗೆ ಹೋಗು" ಎಂದರ್ಥವಾಗುತ್ತದೆ. ಇದನ್ನು ಮಾಡುವವರಿಗೆ ದೇವರು ಇರುವದಿಲ್ಲ.

ಅಧ್ಯಯನ ಪ್ರಶ್ನಾವಳಿಯ ಹಿಂಬದಿಯಲ್ಲಿಯ ಚಿತ್ರವನ್ನು ಗಮನಿಸಿರಿ, ಎಲ್ಲಾ ಸತ್ಯವು ಯೇಸುವಿನಿಂದ ಕೊಡಲ್ಪಟ್ಟಿದೆ. ಆತನ ಬೋಧನೆಯ ಹೊರಗೆ ಹೋಗು

ವವರು, ವರ್ತುಳದ ಹೊರಗಿರುವವರು [ವರ್ತುಳದ ಒಳಗಿನಿಂದ ಹೊರಗಡೆಗೆ ಒಂದು ಬಾಣವನ್ನು ಗುರುತಿಸಿರಿ. ಪುಟ 192ನ್ನು ನೋಡಿರಿ.] ಯೇಸುವಿನ ಬೋಧನೆಯನ್ನು ಬಿಟ್ಟು ಮನುಷ್ಯರ ಬೋಧ ನೆಯೊಳಗೆ ಹೋಗುತ್ತಿರುವರು. ಇದನ್ನು ಮಾಡುವವರಿಗೆ ದೇವರು ಇರುವದಿಲ್ಲ. ಯೇಸುವಿನ ಬೋಧನೆಯಲ್ಲಿ ಉಳಿದುಕೊಳ್ಳುವವರಿಗೆ ತಂದೆಯೂ ಕುಮಾರನೂ ಇಬ್ಬರೂ ಇರುವರು.

ಈ ಭಾಗದಲ್ಲಿ ನಾವು ಏನನ್ನು ಕಲಿತುಕೊಂಡಿರುವೆವು? ಯೇಸುವಿನ ಬೋಧ ನೆಯಲ್ಲಿ ನಾವು ಉಳಿಯಬೇಕೆಂದು ನಾವು ಕಲಿತುಕೊಂಡಿರುವೆವು. ಆತನು ಹೇಳಿ ದ್ದಕ್ಕೆ ನಾವು ಕೂಡಿಸಬಾರದು ಇಲ್ಲವೇ ಆತನು ಬೋಧಿಸಿದ್ದರಿಂದ ಯಾವುದನ್ನೂ ತೆಗೆದುಹಾಕಬಾರದು.

ಈಗ ಪುನಃ ಭಾಗ IIIಕ್ಕೆ ಹಿಂದಿರುಗಿ ಹೋಗೋಣ, ಮತ್ತು "ಕ್ರಿಸ್ತನಿಂದ" ಹಾಗೂ "ಮನುಷ್ಯರಿಂದ" ಎಂಬವುಗಳ ಕೆಳಗೆ ನಮೂದಿಸಿರುವ ಆ ಸಂಗತಿಗಳನ್ನು ಕುರಿತು ಕೇಳೋಣ. ಒಬ್ಬನು ಯೇಸುವಿನ ಮುಖಾಂತರ ಪ್ರಾರ್ಥಿಸಿದರೆ, ಅವನು ವೃದ್ಧಿ ಗೊಂಡಂತೆ - ಕೊಡುವುದಾದರೆ, ವಾರದ ಮೊದಲನೆಯ ದಿನದಲ್ಲಿ ಅವನು ಕರ್ತನ ಭೋಜನದಲ್ಲಿ ಪಾಲುಗಾರನಾದರೆ, ಅವನು ಹಾಡಿದರೆ, ಮತ್ತು ಅವನು ಬೋಧಿಸಿದರೆ, ಯೇಸುವು ಬೋಧಿಸಿದ್ದಕ್ಕೆ ಅವನು ಯಾವುದನ್ನು ಕೂಡಿಸುತ್ತಿರುವನು? ಯೇಸುವು ಬೋಧಿಸಿದ್ದರಿಂದ ಅವನು ಯಾವುದನ್ನು ತೆಗೆದು ಹಾಕುತ್ತಿರುವನು?

ಒಬ್ಬನು ಮರಿಯಳಿಗೆ ಪ್ರಾರ್ಥಿಸಿದರೆ ಅವನು ಕೂಡಿಸುತ್ತಿರುವನೋ? ಅವನು ತೆಗೆದು ಹಾಕುತ್ತಿರುವನೋ? ಅವನು ಕೂಡಿಸುತ್ತಿದ್ದಾನೆ, ಮತ್ತು ಅವನು ಯೇಸುವಿನ ಮುಖಾಂತರ ಪ್ರಾರ್ಥಿಸದಿದ್ದರೆ, ಅವನು ತೆಗೆದು ಹಾಕುತ್ತಿದ್ದಾನೆ. ಒಬ್ಬನು ಧೂಪವನ್ನು ತನ್ನ ಪ್ರಾರ್ಥನೆಯೊಂದಿಗೆ ಉಪಯೋಗಿಸಿದರೆ, ಅವನು ಕೂಡಿಸುತ್ತಿದ್ದಾನೆ.

ಒಬ್ಬನಿಗೆ ರ್‍ಯಾಫಲುಗಳು, ಮಾರಾಟಗಳು ಇತ್ಯಾದಿಗಳು ಇದ್ದರೆ ಅವನು ಕೂಡಿಸುತ್ತಿರುವನೋ? ಅವನು ತೆಗೆದು ಹಾಕುತ್ತಿರುವನೋ? ಇವುಗಳನ್ನು ಮಾಡುವದರಿಂದ ಅವನು ಕೂಡಿಸುತ್ತಿದ್ದಾನೆ, ಮತ್ತು ಅವುಗಳನ್ನು ಅವನು ಉಪಯೋಗಿಸಿ ಹಾಗೂ ಕೊಡದಿದ್ದರೆ, ಕೊಡದೇ ಇರುವದರಿಂದ ಅವನು ತೆಗೆದು ಹಾಕಿದ್ದಾನೆ.

ಒಬ್ಬನು ಕರ್ತನ ಭೋಜನದಲ್ಲಿ ಕೇವಲ ರೊಟ್ಟಿಯನ್ನು ಮಾತ್ರ ಉಪಯೋಗಿ ಸಿದರೆ, ಅವನು ತೆಗೆದು ಹಾಕಿರುವನೋ? ದ್ರಾಕ್ಷಾರಸದ ಬದಲು ಅವನು ನೀರನ್ನು ಉಪಯೋಗಿಸಿದರೆ, ಅವನು ತೆಗೆದು ಹಾಕಿದ್ದಾನೆ ಮತ್ತು ಕೂಡಿಸಿದ್ದಾನೆ. ಪ್ರತೀ ವಾರ ಕರ್ತನ ಭೋಜನದಲ್ಲಿ ಭಾಗವಹಿಸದಿದ್ದರೆ ಬರೆಯಲ್ಪಟ್ಟ ಸಂಗತಿಗಳಿಂದ ತೆಗೆದು ಹಾಕುತ್ತಾನೆ. ಒಬ್ಬನು ಸೇಬು ರಸವನ್ನು ಬದಲಾಗಿ ಉಪಯೋಗಿಸಿದರೆ ಇಲ್ಲವೇ ಕರ್ತನ ಭೋಜನದ ಬ್ರೆಡ್ಡಿನ ಮೇಲೆ ಬೆಣ್ಣೆ ಮತ್ತು ಜೆಲ್ಲಿಯನ್ನು ಹಚ್ಚಿದರೆ ಅವನು ವಾಕ್ಯದಲ್ಲಿ ಬೋಧಿಸಿದ್ದಕ್ಕೆ ಕೂಡಿಸುತ್ತಾನೆ ಮತ್ತು ಅದರಿಂದ ತೆಗೆದು ಹಾಕುತ್ತಾನೆ, ಇಂಥದ್ದನ್ನು ತಿರಸ್ಕರಿಸಬೇಕು.

ಒಬ್ಬನು ಸಂಗೀತ ವಾದ್ಯಗಳನ್ನು ಉಪಯೋಗಿಸಿದರೆ, ಅವನು ಕರ್ತನ ಆರಾಧನೆಗೆ ಕೂಡಿಸುತ್ತಿರುವನು. ವಾದ್ಯವು ಹಾಡುವುದರ ಬದಲು ಉಪಯೋಗಿಸಲ್ಪಟ್ಟರೆ, ಒಬ್ಬನು ಕೂಡಿಸುತ್ತಾನೆ ಮತ್ತು ತೆಗೆದು ಹಾಕುತ್ತಾನೆ.

ಲಂಚಗಳು, ಒತ್ತಾಯ ಇಲ್ಲವೇ ಮನರಂಜನೆಗಳು ಬೋಧಿಸಲ್ಪಡುವ ಬದಲು ಉಪಯೋಗಿಸಲ್ಪಟ್ಟರೆ ಒಬ್ಬನು ಕೂಡಿಸುತ್ತಾನೆ ಹಾಗೂ ತೆಗೆದು ಹಾಕುತ್ತಾನೆ. ಒಬ್ಬನು ಇವುಗಳನ್ನು ಮಾಡಿ ಮತ್ತು ಬೋಧಿಸಿದರೆ, ಅವನು ಕೂಡಿಸುತ್ತಾನೆ.

ಯೇಸುವು ಸಭೆಯ ಶಿರಸ್ಸು. ಎಲ್ಲಾ ಆರಾಧನೆಯು ಹೊಸ ಒಡಂಬಡಿಕೆಯಲ್ಲಿ ಆತನ ವಾಕ್ಯದಲ್ಲಿ ಬೋಧಿಸಿದಂಥ ಆ ಸಂಗತಿಗಳಿಗೆ ಅನುಗುಣವಾಗಿರತಕ್ಕದ್ದು.

**ಸಾರಾಂಶ**

ಈ ಪಾಠದಲ್ಲಿ ನಾವು ದೇವರನ್ನು ಆರಾಧಿಸುವದರಲ್ಲಿ ನಾವು ಏನನ್ನು ಉಪಯೋಗಿಸಬೇಕು ಎಂದು ಯೋಚಿಸುವಾಗ ನಮಗೆ ಮಾರ್ಗದರ್ಶನ ಮಾಡುವ ತತ್ವಗಳನ್ನು ಯೋಚಿಸಿದ್ದೇವೆ. ದೇವರಿಗೆ ನಮ್ಮ ಆರಾಧನೆಯಲ್ಲಿ ನಾವು ಮಾಡುವಂಥದ್ದು ಆತನಿಗೆ ಸ್ವೀಕಾರ ಯೋಗ್ಯವಾಗಿರಬೇಕೆಂಬುದರ ಬಗ್ಗೆ ನಿಶ್ಚಿತತೆಯುಳ್ಳವರಾಗಿರತಕ್ಕದ್ದು.

I. *ದೇವರು ಅಪೇಕ್ಷಿಸುವದನ್ನು ನೀನು ಆರಾಧನೆಯಲ್ಲಿ ಉಪಯೋಗಿಸುವಿಯೋ?* ಆತ್ಮದಲ್ಲಿ ಮತ್ತು ಸತ್ಯದಲ್ಲಿ ಇರುವ ಆರಾಧನೆಯನ್ನು ದೇವರು ಅಪೇಕ್ಷಿಸುತ್ತಾನೆ. ಎಲ್ಲಾ ಸತ್ಯವು ಯೇಸುವಿನಿಂದ ಬಂದಿರುವುದು ಮತ್ತು ಹೊಸ ಒಡಂಬಡಿಕೆಯ ಅಪೊಸ್ತಲರ ಮತ್ತು ಪ್ರವಾದಿಗಳ ಮುಖಾಂತರ ಪ್ರಕಟಿಸಲ್ಪಟ್ಟಿರುವುದು. ಯೇಸುವು ಆಜ್ಞಾಪಿಸಿದ ಎಲ್ಲವನ್ನೂ ನಾವು ಕೈಕೊಳ್ಳಬೇಕು.

II. *ದೇವರು ತಿರಸ್ಕರಿಸಿದ್ದನ್ನು ನೀನು ಉಪಯೋಗಿಸುವಿಯೋ?* ದೇವರು ಮನುಷ್ಯರ ಸಾಂಪ್ರದಾಯಗಳನ್ನೂ ಆಜ್ಞೆಗಳನ್ನೂ ತಿರಸ್ಕರಿಸುತ್ತಾನೆ. ಯೇಸುವಿನಿಂದ ಬೋಧಿಸಲ್ಪಟ್ಟದ್ದನ್ನು ಮಾತ್ರವೇ ಆತನು ಸ್ವೀಕರಿಸುತ್ತಾನೆ. ಮನುಷ್ಯರ ಬೋಧನೆಗನುಸಾರವಾಗಿ ನಾವು ದೇವರನ್ನು ಆರಾಧಿಸಲು ಹುಡುಕಿದರೆ ನಮ್ಮ ಆರಾಧನೆಯು ನಿರುಪಯೋಗವಾದದ್ದಾಗಿರುತ್ತದೆ.

III. *ಕ್ರಿಸ್ತನಿಂದ ಬಂದದ್ದನ್ನು ನೀವು ಉಪಯೋಗಿಸುತ್ತೀರೋ ಇಲ್ಲವೇ ಮನುಷ್ಯರಿಂದ ಬಂದದ್ದನ್ನು ಉಪಯೋಗಿಸುತ್ತೀರೋ?* ನಾವು ಪ್ರಾರ್ಥಿಸಬೇಕು, ಕೊಡಬೇಕು, ಪ್ರತೀ ವಾರ ಕರ್ತನ ಭೋಜನವನ್ನು ಆಚರಿಸಬೇಕು, ಹಾಡಬೇಕು ಮತ್ತು ಬೋಧಿಸಬೇಕು ಎಂದು ಯೇಸುವು ಬಯಸುತ್ತಾನೆ ಎಂದು ನಾವು ಕಲಿತುಕೊಂಡಿದ್ದೇವೆ. ಇವುಗಳಿಗೆ ಸಂಬಂಧಿಸಿ ಜನರು ಅನೇಕ ಆಚರಣೆಗಳನ್ನು ಪರಿಚಯಿಸಿದ್ದಾರೆ ಮತ್ತು ನಾವು ಮಾಡಬೇಕೆಂದು ಯೇಸುವು ಹೇಳಿದ್ದನ್ನು ಬದಲಾವಣೆ ಮಾಡಿದ್ದಾರೆ.

IV. *ನೀನು ಕೂಡಿಸಿರುವೆಯೋ ಇಲ್ಲವೇ ತೆಗೆದು ಹಾಕಿದ್ದೀಯೋ?* ನಾವು ಕೂಡಿಸಬಾರದು ಇಲ್ಲವೇ ತೆಗೆದು ಹಾಕಬಾರದು ಎಂದು ಬೈಬಲ್ ಬೋಧಿಸುತ್ತದೆ. ಯೇಸುವು ಆಜ್ಞಾಪಿಸಿದ ಸಂಗತಿಗಳಿಗೆ ಮನುಷ್ಯರು ಕೂಡಿಸಿದ್ದಾರೆ ಮತ್ತು ಅದರಿಂದ ತೆಗೆದು ಹಾಕಿದ್ದಾರೆ. ದೇವರು ಮತ್ತು ಕ್ರಿಸ್ತನು ನಮಗಿರಲು, ನಾವು ಮನುಷ್ಯರು ಮಾಡಿದ ಈ ಬದಲಾವಣೆಗಳನ್ನು ಅನುಸರಿಸಬಾರದು.

ಯೇಸು ಮಾತ್ರವೇ ನಿಯಮಕೊಡುವಾತನು (ಯಾಕೋಬ 4:12). ಮನುಷ್ಯರಿಗೆ ಆಚರಣೆಗಳನ್ನು ಸ್ಥಾಪಿಸುವುದಕ್ಕೂ ನಿಯಮಗಳನ್ನು ಮಾಡುವದಕ್ಕೂ ಅಧಿಕಾರವಿರುವದಿಲ್ಲ. ಯೇಸುವಿಗೆ ಮಾತ್ರ ಆ ಅಧಿಕಾರ ಇರುತ್ತದೆ.

[ಮುಂದಿನ ಅಧ್ಯಯನಕ್ಕಾಗಿ ಸಮಯ ಏರ್ಪಡಿಸಿರಿ.]

© 2009 Truth for Today